## ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ರಾಣೇಬೆನ್ನೂರು.

## ಸಿಸಿ ನಂಬರಃ 960/2019

ಸಿ ಡಬ್ಲ್ಯೂ -4

ಪಿ ಡಬ್ಲ್ಯೂ-3

| | | |
|---|---|---|
| **ಸಾಕ್ಷಿದಾರರ ಹೆಸರು** | : | ಪರಶುರಾಮ |
| **ತಂದೆ/ಗಂಡನ ಹೆಸರು** | : | ರಾಮಪ್ಪ ಹಲವಾಗಲ |
| **ವಯಸ್ಸು** | : | 40 ವರ್ಷ |
| **ಉದ್ಯೋಗ** | : | ವ್ಯವಸಾಯ |
| **ವಾಸ** | : | ಅರೇಮಲ್ಲಾಪುರ |

**ದಿನಾಂಕಃ- 13-11-2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರು ಅವರಿಂದಃ**

ಚಾಸಾ-1 ನನಗೆ ಗೊತ್ತು. ನನಗೆ ಆರೋಪಿತರ ಪರಿಚಯವಿದೆ. ಈಗ ಸುಮಾರು 4 ವರ್ಷಗಳ ಹಿಂದೆ ಅರೇಮಲ್ಲಾಪುರ ಗ್ರಾಮದಲ್ಲಿರುವ ನನ್ನ ಜಮೀನಿನಲ್ಲಿ ಒಂದು ಮನೆ ಇದೆ. ಆ ಮನೆಯಲ್ಲಿ ಎರಡು ಕುರಿಗಳನ್ನು ಕಟ್ಟಿ ಹಾಕಲಾಗಿತ್ತು. ಆಗ ಸಂಜೆ 07.00 ಗಂಟೆಯ ಸಮಯದಲ್ಲಿ ಒಂದು ಕುರಿ ನಾವು ಕಟ್ಟಿದ್ದ ಸ್ಥಳದಲ್ಲಿದ್ದು ಇನ್ನೊಂದು ಕುರಿಯನ್ನು ಬೈಕಿನಲ್ಲಿ 3 ಜನರು ತೆಗೆದುಕೊಂಡು ಹೋಗುತ್ತಿದ್ದರು. ಆಗ ನಮ್ಮನ್ನು ನೋಡಿ ಆ ಕುರಿ ಮತ್ತು ಬೈಕನ್ನು ಬಿಟ್ಟು ಓಡಿ ಹೋದರು. ಅದರಲ್ಲಿ 1 ಮತ್ತು 3 ನೇ ಆರೋಪಿತರನ್ನು ಸ್ಥಳದಲ್ಲಿ ಊರಿನವರು ಹಿಡಿದುಕೊಂಡು ಪೋಲಿಸರಿಗೆ ಒಪ್ಪಿಸಿರುತ್ತಾರೆ. ಆ ಕುರಿ ಚಾಸಾ-1 ರವರಿಗೆ ಸೇರಿತ್ತು. ನಾನು ಪೋಲಿಸರಿಗೆ ಹೇಳಿಕೆಯನ್ನು ಕೊಟ್ಟಿರುತ್ತೇನೆ.

**ಪಾಟೀ ಸವಾಲು : ಆರೋಪಿತರ ಪರ ಶ್ರೀ ಸಿ.ಬಿ.ಕೆ ವಕೀಲರಿಂದಃ**

ನನಗೆ ಕುರಿ ಕಳ್ಳತನ ಆಗಿದ್ದ ದಿನಾಂಕ ಗೊತ್ತಿದೆಯಾ ಎಂದರೆ ಇಲ್ಲ ಆದರೆ 2019 ನೇ ಇಸವಿ ಆಗಿತ್ತು. ಆರೋಪಿತರು ಬೈಕಿನಲ್ಲಿ ಕುರಿ ತೆಗೆದುಕೊಂಡು ಹೋಗುವುದನ್ನು ಎಷ್ಟು ದೂರದಿಂದ ನೋಡಿದ್ರಿ ಎಂದರೆ 200-300 ಮೀಟರ್ ದೂರದಲ್ಲಿ ನೋಡಿರುತ್ತೇನೆ. ನಾನು ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಆ ಬೈಕಿನ ನಂಬರು ಎನು ಎಂದರೆ ನನಗೆ ಗೊತ್ತಿಲ್ಲ. ಕುರಿ ಬಣ್ಣ ಯಾವುದು ಇತ್ತು ಎಂದರೆ ಕಪ್ಪು ಬಣ್ಣ ಆಗಿತ್ತು ತಲೆಯ ಮೇಲೆ ಸ್ವಲ್ಪ ಬಿಳಿ ಕಲರ್ ಇತ್ತು. ಆರೋಪಿತರನ್ನು ಯಾರು ಹಿಡಿದರು ಎಂದರೆ ಊರಿನ ಜನರು ತುಂಬಾ ಇದ್ದರು. ಆ ದಿವಸ ಆರೋಪಿತರು 3 ಜನರು ಇದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿವಸ

ಸಿ ಡಬ್ಲ್ಯೂ -4

ಪಿ ಡಬ್ಲ್ಯೂ-3

ಆರೋಪಿತರು ಯಾವುದೇ ಕುರಿಯನ್ನು ಕಳ್ಳತನ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ.

ಸಹಿ/-

(ಬಿ.ಸಿದ್ದರಾಜು)

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,

ರಾಣೇಬೆನ್ನೂರು.